ಅವನ್ನು ಉಪಯೋಗಿಸಿ ಮನೆ ಸಾಮಾನು ಒಡೆದು ಹಾಕ್ತೀವಿ, ಇಲಿಯನ್ನಲ್ಲ!

ಸ್ವತಃ ನಾನು, ಇಲಿ ಹೊಡಿಯೋಕೆ ಹೋಗಿ ಗುರಿ ತಪ್ಪಿ ಒಂದು ಬಕೇಟು, ನಮ್ಮಮ್ಮನ ಮಡಿ ಕೋಲು, ನನ್ನ ಬೆಡ್‌ರೂಮಿನ ಡ್ರೆಸ್ಸಿಂಗ್ ಮಿರರ್ ಎಲ್ಲಾ ಒಡೆದು ಹಾಕಿದೀನಿ. ಹುಲಿ ಬೇಟೆ ಸುಲಭ. ಯಾಕಂತೀರಾ..? ಹುಲಿ ಮಿಕ ಇರೋ ಜಾಗಕ್ಕೆ ಬರುತ್ತೆ! ಆದರೆ ಇಲಿ ಬರೋದಿಲ್ಲ. ಬದಲಿಗೆ ಅದಿರುವ ಜಾಗ ನಾವೇ ಹುಡುಕಿ ಸಂಹಾರ ಮಾಡಬೇಕು! ಅದು ಸಾಮಾನ್ಯ ಕೆಲಸವಲ್ಲ! ಹುಲಿ ಹೊಡೆದವರೂ ಇಲಿ ಹೊಡೆಯಲಾರದೆ ಸೋಲುವರು! ಇಲಿ ಬುದ್ಧಿಯಲ್ಲಿ ಚುರುಕಂತೆ! ಈ ಕಾರಣಕ್ಕೇ ಮನುಷ್ಯರ ಮೇಲೆ ಪ್ರಯೋಗ ಮಾಡಬೇಕೆನ್ನುವ ಔಷಧಗಳನ್ನು ಮೊದಲು ಇಲಿಗಳ ಮೇಲೆ ಪ್ರಯೋಗಿಸುತ್ತಿರಬೇಕು!

ಬಹುತೇಕ ಎಲ್ಲರೂ ಜೀವನದಲ್ಲಿ ಒಂದಲ್ಲ ಒಂದು ಸಲ ಇಲಿ ಬೇಟೆ ಆಡಲೇಬೇಕಾಗಿ ಬಂದಿರುತ್ತದೆ! ಆ ಅನುಭವ ಮನಸ್ಸಿನಲ್ಲಿ ತಾಜಾ ಆಗಿ ಉಳಿದಿರುತ್ತೆ! ನೆನಸಿಕೊಂಡರೆ ನಗು ಬರುತ್ತದೆ. ಈ ಲೇಖನ ಓದಿದರೆ ಆ ಎಲ್ಲಾ ಘಟನೆಗಳು ನಿಮ್ಮ ಮನಸ್ಸಿನಲ್ಲಿ ಮರುಸೃಷ್ಟಿ ಆಗಬಹುದು! ಎಲ್ಲರ ಅನುಭವವೂ ಒಂದೇ ರೀತಿ ಇರುವುದಿಲ್ಲ! ಕಾಲ, ಜಾಗ ಮತ್ತು ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆಯಾಗಿರುತ್ತವೆ. ಹೀಗಾಗಿ ಇಲಿ ಬೇಟೆಯ ವಿಧಿ–ವಿಧಾನಗಳೂ ಬೇರೆ ಬೇರೆಯಾಗಿರುತ್ತವೆ!

ಮನೆಯಲ್ಲಿ ಇಲಿ ಇದೆ ಎಂದು ತಿಳಿಯುವುದು ಯಾವಾಗ ಗೊತ್ತೆ? ಬೆಲೆ ಬಾಳುವ ಉಡುಪು ಇಲಿ ಕಡಿದು ತೂತಾದಾಗ! ಇಲಿ ಮನೆ ಪ್ರವೇಶ ಮಾಡಿದೆ ಎಂದು ಗೊತ್ತಾದಾಗ ಮೊದಲು ಬರುವ ಯೋಚನೆ ಅದನ್ನು ಬೋನಲ್ಲಿ ಹಿಡಿಯುವುದು. ಬೋನು ಮನೆಯಲ್ಲಿದ್ದರೆ ಸರಿ, ಇಲ್ಲದಿದ್ದರೆ ಖರೀದಿಸಬೇಕಾಗುತ್ತದೆ; ಪಕ್ಕದ ಮನೆಯಿಂದ ಎರವಲು ಪಡೆಯಲೂಬಹುದು. ಸರಿ ಬೋನು ರೆಡಿಯಾಯಿತೆನ್ನಿ, ಇನ್ನು ಅದನ್ನು ಸರಿಯಾದ ಜಾಗದಲ್ಲಿಡಬೇಕು. ಸರಿಯಾದ ಜಾಗ ಅಂದರೆ ಇಲಿ ಸಾಮಾನ್ಯವಾಗಿ ಓಡಾಡುವ ಜಾಗ! ಅಲ್ಲಿ ಬೋನಿಡಬೇಕು. ಸುಮ್ಮನೆ ಬೋನಿಟ್ಟರೆ ಇಲಿ ಬೀಳುತ್ತದೆಯೆ? ಇಲ್ಲ. ಬೋನಿನಲ್ಲಿ ಆಹಾರ ಸಿಕ್ಕಿಸಿದರೆ ಅದನ್ನು ತಿನ್ನಲು ಬಂದು ಸಿಕ್ಕಿಕೊಳ್ಳುತ್ತದೆ ಎಂದು ಎಲ್ಲರ ತಿಳುವಳಿಕೆ. ಅದು ಸುಳ್ಳು! ನನ್ನ ಸ್ವಂತ ಅನುಭವದ ಪ್ರಕಾರ, ಅದಕ್ಕೆ ಪ್ರಿಯವಾದ ಎಣ್ಣೆಯಲ್ಲಿ ಕರಿದ ಬೋಂಡ, ವಡೆ ಮುಂತಾದುವನ್ನು ಇಟ್ಟರೆ ಮಾತ್ರ ಬಂದು ಬೀಳುತ್ತದೆ!

ಇಲಿಗಳು ಸಾಮಾನ್ಯ ಪ್ರಾಣಿಗಳಲ್ಲ! ಬೋನಿನೊಳಕ್ಕೆ ಹೋಗಿ ಆಹಾರ ತಿಂದೂ ಬೋನಿನಿಂದ ತಪ್ಪಿಸಿಕೊಳ್ಳೋವಷ್ಟು ಚತುರತೆ ಇಲಿಗಳಲ್ಲಿ ಇದೆಯಂತೆ! ಒಮ್ಮೊಮ್ಮೆ ಇಲಿ ಬೋನಿಗೆ ಬೀಳಬಹುದು, ಬೀಳದೆಯೂ ಇರಬಹುದು! ಮನೆಯಲ್ಲಿ ಒಂದಕ್ಕಿಂತ ಹೆಚ್ಚಿಗೆ ಇಲಿಗಳಿದ್ದರೆ ಹಲವಾರು ದಿನಗಳು ಬೋನನ್ನು ಇಡಬೇಕಾಗುತ್ತದೆ.

ಇದು ಮೊದಲ ಹಂತ. ಇಲಿ ಬೋನಿಗೆ ಬಿತ್ತು ಎನ್ನಿ! ಅದನ್ನೇನು ಮಾಡಬೇಕು..? ಇದು ಸಾಮಾನ್ಯ ಸಮಸ್ಯೆಯಲ್ಲ! ಇಲ್ಲಿ ಎರಡು ಆಯ್ಕೆಗಳಿರುತ್ತವೆ. ಒಂದು ಎಲ್ಲಿಯಾದರೂ ದೂರ ನಿರ್ಜನ ಪ್ರದೇಶಕ್ಕೆ ಬೋನು ತೆಗೆದುಕೊಂಡು ಹೋಗಿ ಅಲ್ಲಿ ಬಿಡುವುದು! ಎರಡು, ಸಂಹಾರ ಮಾಡುವುದು! ಮೊದಲನೆಯದು ಪರವಾಗಿಲ್ಲ ಮಾಡಬಹುದು! ಎರಡನೆಯದು? ಪ್ರಾಣಹರಣ..? ಇದಕ್ಕೆ ಎಲ್ಲರಿಗೂ ಮನಸ್ಸು ಬರುವುದಿಲ್ಲ, ಪಾಪ ಎನಿಸುತ್ತದೆ! ಅದೂ ಒಂದು ಜೀವ. ಅದಕ್ಕೂ ಬದುಕುವ ಹಕ್ಕಿದೆ ಎಂದೆಲ್ಲಾ ಯೋಚನೆ ಬರಬಹುದು. ಅಂತಾ ಅಳುಕು ಮನಸ್ಸಿನಲ್ಲಿ ಮೂಡಿದರೆ ಇಲಿ ಸಂಹಾರ ಸಾಧ್ಯವಿಲ್ಲ.

ಒಂದು ವೇಳೆ ನಿಮ್ಮ ಬೆಲೆ ಬಾಳುವ ಉಡುಪು ಇಲ್ಲವೇ ವಸ್ತುವನ್ನೇನಾದರೂ ಅದು ಕಡಿದು ಹಾಳು ಮಾಡಿದ್ದರೆ ನಖಶಿಖಾಂತ ಉರಿದು ಅವಡುಗಚ್ಚಿ ಅದನ್ನು ಸಾಯಿಸಬೇಕೆನ್ನುವ ನಿರ್ಧಾರಕ್ಕೆ ಬರಬಹುದು! ಆದರೆ ಹೇಗೆ? ಸಾಯಿಸಲು ಅದು ಕೈಗೆ ಸಿಗುವುದೆ? ಬೋನಿನ ಬಾಯಿ ತೆಗೆದ ತಕ್ಷಣ ಚಂಗನೆ ನೆಗೆದು ತಪ್ಪಿಸಿಕೊಳ್ಳುತ್ತದೆ. ನೀವು ಬಡಿಗೆ ಎತ್ತುವವರೆಗೆ ಅಥವಾ ಬಡಿಗೆ ಬೀಸಿದರೂ ಅದು ಅದರ ಗುರಿಗೆ ಸಿಕ್ಕದು! ಮತ್ತೆ ಅದನ್ನು ಹೇಗೆ ಸಂಹರಿಸುವುದು?

ಒಮ್ಮೆ, ಇಲಿಯ ಪ್ರಾಣಹರಣದ ಸಂದಿಗ್ಧಕ್ಕೆ ನನ್ನ ಸಂಸಾರ ಸಿಕ್ಕಿದ್ದಾಗ ಮನೆ ಕೆಲಸದ ಮುನಿಯಮ್ಮ ಎರಡು ಸಲಹೆಗಳನ್ನು ಕೊಟ್ಟಳು. ಮೊದಲನೆಯದು– ಬೋನಿನ ಬಾಯಿ ತೆಗೆಯುವ ಮುಂಚೆ ಒಂದು ಗೋಣಿಚೀಲವನ್ನು ಬಾಯಿ ತೆರೆದು ಬೋನಿನ ಮುಂದೆ ಇಡುವುದು. ಇಲಿ ಚಂಗನೆ ನೆಗೆದು ಚೀಲ ಸೇರುತ್ತದೆ. ಆಗ ಚೀಲದ ಬಾಯಿ ಮುಚ್ಚಿ ಇಡೀ ಚೀಲವನ್ನು ಇಲಿ ಸಮೇತ ನೆಲಕ್ಕೆ ಬಡಿಯುವುದು! ಇದು ಕ್ರೂರ, ರಾಕ್ಷಸೀ ಕೃತ್ಯ ಎನಿಸಿದರೆ ಎರಡನೆಯ ವಿಧಾನವನ್ನು ಅನುಸರಿಸಬಹುದು. ಇಡೀ ಬೋನನ್ನು, ಇಲಿ ಸಮೇತ ಒಂದು ಬಕೇಟಿನಲ್ಲಿ ಮುಳುಗಿಸುವುದು. ಇದರಿಂದ ಇಲಿ ಉಸಿರುಗಟ್ಟಿ ಸಾಯುತ್ತದೆ. ನಂತರ ಸತ್ತ ಇಲಿಯನ್ನು ಎಲ್ಲಿಯಾದರೂ ನಿರ್ಜನ ಪ್ರದೇಶದಲ್ಲಿ ಬಿಸಾಡುವುದು!

ಈ ಎರಡು ವಿಧಾನಗಳಲ್ಲದೆ ಇನ್ನೂ ಅನೇಕ ವಿಧಾನಗಳು ಚಾಲ್ತಿಯಲ್ಲಿರಲು ಸಾಧ್ಯ. ಅವುಗಳನ್ನು ಹೆಚ್ಚಿನ ವಿಚಾರ ವಿನಿಮಯದಿಂದ ತಿಳಿಯಬಹುದು. ಆದರೆ ಅದಕ್ಕೆ ಇಲಿ ಬೇಟೆಗಾರರು ಒಂದೆಡೆ ಕಲೆಯಬೇಕು. ಅದಕ್ಕೆ ಒಂದು ವೇದಿಕೆ ಬೇಕು! ಆ ಕೆಲಸ ಯಾರು ಮಾಡಬೇಕು? ನಾನಂತೂ ಹುಟ್ಟಾ ಸೋಂಬೇರಿ. ಏಕಾಂತಪ್ರಿಯ! ಈ ಕಾರಣಗಳಿಂದ ನನ್ನ ಇಲಿ ಬೇಟೆಯ ವಿಧಿ–ವಿಧಾನಗಳ ಬಗೆಗೆ ಬರೆಯಬೇಕೆಂದಿದ್ದ ಪುಸ್ತಕವೇ ಇನ್ನೂ ಶುರುವಾಗಿಲ್ಲ!

ಇಲಿ ಬಗೆಗೆ ನಮಗೆ ಅಂದರೆ ಭಾರತೀಯರಿಗೆ ಅದರಲ್ಲೂ ಹಿಂದೂಗಳಿಗೆ ಮೃದು ಧೋರಣೆ. ಕಾರಣ ಇಲಿ ಯಾನೆ ಮೂಷಿಕ ಜನಪ್ರಿಯ ದೇವರು ಗಣೇಶನ ವಾಹನ. ಎಲ್ಲೋ ಉತ್ತರ ಭಾರತದಲ್ಲಿ ಇಲಿಗಳಿಗಾಗಿಯೇ ಒಂದು ದೇವಳ ಕೂಡ ಇದೆಯಂತೆ. ಅಲ್ಲಿ ಇಲಿಗಳೋ ಇಲಿಗಳು! ಅವಕ್ಕೆ ಯಥೇಚ್ಛ ಆಹಾರವನ್ನು ಭಕ್ತರೇ ನೀಡುತ್ತಾರಂತೆ. ಇನ್ನೂ ಅಚ್ಚರಿಯೆಂದರೆ ಇಲ್ಲೇ ಮೈಸೂರಿನ ಪಕ್ಕದಲ್ಲೇ ಇರುವ ಮಂಡ್ಯ ಜಿಲ್ಲೆಯಲ್ಲಿ ಒಂದು ಊರಿನಲ್ಲಿ ಮಾರ್ಜಾಲಕ್ಕೆ ದೇವಳವಿದೆಯಂತೆ. ಅಲ್ಲಿ ದೇವರು ಮಾರ್ಜಾಲ! ಏನೀ ವಿಚಿತ್ರ!

ನನ್ನ ಮೊದಲ ಕೆಲಸ ಕೆಜಿಎಫ್‌ನಲ್ಲಿ ಶುರುವಾಯಿತು. ಕೆ.ಜಿ.ಎಫ್ ಎನ್ನುವುದು ಕೋಲಾರ ಚಿನ್ನದ ಗಣಿ ಪ್ರದೇಶ ಅನ್ನುವುದರ ಸಂಕ್ಷಿಪ್ತ ರೂಪ. ಅಲ್ಲಿ ಸರ್ಕಾರಿ ಸ್ವಾಮ್ಯದ ಬೃಹತ್ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುವಾಗ ಬಂಗಾರಪೇಟೆಯಲ್ಲಿ ವಾಸ ಮಾಡುತ್ತಿದ್ದೆ. ಆ ಊರು ಕುವೆಂಪುರವರ ಬೊಮ್ಮನ ಹಳ್ಳಿಯನ್ನು ನೆನಪಿಗೆ ತರುವಂತಿತ್ತು! ಆದರೆ ಅಲ್ಲಿ ನದಿಯಿರಲಿಲ್ಲ. ನಾನಿದ್ದ ಬಾಡಿಗೆ ಮನೆಯಲ್ಲಿ, ಅಡಿಗೆಮನೆ ಮತ್ತು ಬಚ್ಚಲು ಭಾಗ ಹೆಂಚಿನದು. ರಾತ್ರಿ ನಾವು ದೀಪ ಆರಿಸಿ ಮಲಗುತ್ತಲೇ ಇಲಿಗಳು ದಡದಡನೆ ಹೆಂಚಿನ ಕೆಳಗಿನ ಜಂತಿಗಳಿಂದ ಓಡಾಡುವ ಶಬ್ದ ಅಡಿಗೆಮನೆಯಿಂದ ಬರುತ್ತಿತ್ತು. ಊರು ತುಂಬಾ ಇಲಿ, ಹೆಗ್ಗಣಗಳು. ಅವುಗಳ ಕಾಟ ಹೇಳತೀರದು. ಅಲ್ಲೇ ನಾನು ಇಲಿಗಳ ಬೇಟೆಯ ಬಗೆಗೆ ಯಾಚಿಸಿದ್ದು, ಯೋಚಿಸಿದ್ದು ಮತ್ತು ಬರೆದದ್ದು!

ನಂತರ ಮೈಸೂರು ಸೇರಿದೆ. ಇಲ್ಲಿನ ಮನೆ ಹಿತ್ತಿಲಲ್ಲಿ ಎರಡು ಅಡಿ ಸುತ್ತಳತೆಯ ಒಂದು ಪಾತಿಯಲ್ಲಿ ವೀಳ್ಯದೆಲೆಯ ಬಳ್ಳಿ ಹಬ್ಬಿಸಿದ್ದೆ. ಇದ್ದಕ್ಕಿದ್ದಂತೆ ಗಿಡ, ಎಲೆಕ್ಷನ್ನಿನಲ್ಲಿ ಡಿಪಾಸಿಟ್ ಕಳೆದುಕೊಂಡ ರಾಜಕಾರಣಿಯಂತೆ ಕಳಾಹೀನವಾಯಿತು. ಅದರ ಬಾಡಿದ ಎಲೆಗಳು ಏನೋ ಹೆಚ್ಚು–ಕಮ್ಮಿಯಾಗಿದೆ ಎಂದು ಸೂಚಿಸಿದವು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಪಾತಿಯ ಒಂದು ಬದಿಯಲ್ಲಿ ಬಿಲ ಕಂಡಿತು. ಒಮ್ಮೆಲೇ ಷರ್ಲಾಕ್ ಹೋಮ್ ಮೈದುಂಬಿದ. ಹುಡುಕಿದರೆ ಹಿತ್ತಿಲಲ್ಲಿ ಒಂದೆರಡು ಇಲಿ ಪಿಚಿಕೆಗಳು ಕಂಡವು. ಅಲ್ಲಿಗೆ ಇಲಿ ಬಂದು ಹೋಗುವುದು ಖಾತ್ರಿಯಾಯಿತು. ಸರಿ ತಡಮಾಡದೆ ಬೋನಿಟ್ಟೆ!

ಮೊದಲ ದಿನವೇ ಸಂಜೆ ಎಂಟರ ಸಮಯಕ್ಕೇ ಬೋನು ಟಪ್ಪನೆ ಶಬ್ದ ಮಾಡಿ ಮುಚ್ಚಿಕೊಂಡಿತು. ಹೋಗಿ ನೋಡಿದರೆ ಬೋನಿನ ತುಂಬಾ ತುಂಬಿಕೊಂಡು, ಈಚೆ ಬರಲಾರದೆ ಬೋನಿನೊಳಗೆ ಸಿಕ್ಕಿಕೊಂಡಿದ್ದ ಭಾರೀ ಸೈಜಿನ ಹೆಗ್ಗಣ ಕಂಡಿತು. ಅದಕ್ಕೆ ಮನೆ ಕೆಲಸದ ಮುನಿಯಮ್ಮನ ಸಲಹೆಯಂತೆ ಗತಿ ಕಾಣಿಸಿದೆ. ಮರುದಿನ ಮತ್ತೊಂದು ಹೆಗ್ಗಣ ಬಿತ್ತು. ಮೂರನೆ ದಿನ ಕೂಡ! ಅಕ್ಷಯ ಸಂತತಿಯಂತೆ ದಿನಕ್ಕೊಂದರಂತೆ ಇಲಿಗಳು ಬಂದು ಬೀಳುತ್ತಿವೆ. ಎಷ್ಟು ಕಾಲ ಈ ಕೆಲಸ ಮಾಡಲಿ? ಎಷ್ಟು ಇಲಿ–ಹೆಗ್ಗಣಗಳನ್ನು ನೀರಿನಲ್ಲಿ ಮುಳುಗಿಸಲಿ? ಆಮೇಲೆ ಅವುಗಳ ಕಳೇಬರ ಎಲ್ಲೆಂದರಲ್ಲಿ ಬಿಸಾಡಲಾಗುತ್ತದೆಯೆ? ನಿರ್ಜನ ಪ್ರದೇಶ ಹುಡುಕಿಕೊಂಡು ಹೋಗಿ ವಿಲೇವಾರಿ ಮಾಡಬೇಕು. ಈ ಕಾಲದಲ್ಲಿ ನಡೆದು ಹೋಗಲು ಸಾಧ್ಯವೆ? ಸ್ಕೂಟರು ಇಲ್ಲವೇ ಕಾರಿನಲ್ಲಿ ಇಲಿಯ ಕಳೇಬರ ಸಾಗಿಸಬೇಕು. ಈ ಕೆಲಸ ಮಾಡುತ್ತಲೇ ಸೋತು ಸುಣ್ಣವಾಗಿದ್ದೇನೆ!

ಸದ್ಯಕ್ಕೆ ಇಲಿ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ನಾನು ಸಂಪೂರ್ಣ ಸೋಲೊಪ್ಪಿರುವೆ. ನೀವೇನಾದರೂ ಇದಕ್ಕೆ ಪರಿಹಾರ ಸೂಚಿಸುವಿರೆಂದು ನಂಬಿರುವೆ. ●